ಕರ್ನಾಟಕ ಸಿವಿಲ್ ಸೇವೆಯಡಿಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ–2 ಮತ್ತು ಪತ್ರಿಕೆ–3ರ ಪಠ್ಯಕ್ರಮ

ಈ ಪರೀಕ್ಷೆಯು ಕೆಳಕಂಡ ಪತ್ರಿಕೆಗಳನ್ನು ಹೊಂದಿರುತ್ತದೆ.

ಪತ್ರಿಕೆ–2 : ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲೀಷ್ : 100 ಅಂಕಗಳು
ಪತ್ರಿಕೆ–3 : ಸಾಮಾನ್ಯ ಜ್ಞಾನ : 100 ಅಂಕಗಳು

ಪ್ರತಿಯೊಂದು ಪತ್ರಿಕೆಯನ್ನು 1½ ಗಂಟೆ ಸಮಯದಲ್ಲಿ ಉತ್ತರಿಸಬೇಕಾಗುತ್ತದೆ.ಸಾಮಾನ್ಯ ಜ್ಞಾನ ಮತ್ತು ಸಾಮಾನ್ಯ ಕನ್ನಡ/ಸಾಮಾನ್ಯ ಇಂಗ್ಲೀಷ್ ಈ ಎರಡು ಪತ್ರಿಕೆಗಳು ವಸ್ತುನಿಷ್ಠ ಬಹು ಆಯ್ಕೆಯ/Objective Multiple Choice Type"ವಿಧಾನದ್ದಾಗಿರುವುದು.

- ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷಿನ ಪತ್ರಿಕೆಯು ಸಾಮಾನ್ಯವಾಗಿ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ವಿದ್ಯಾರ್ಥಿಗೆ ಇರಬೇಕಾದ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು. ಇದರ ಮೂಲಕ ಅಭ್ಯರ್ಥಿಯ ಕನ್ನಡ ಮತ್ತು ಇಂಗ್ಲೀಷ್ ವ್ಯಾಕರಣ ಶಬ್ದ ಸಂಪತ್ತು, ಕಾಗುಣಿತ (Spelling) ಸಮನಾರ್ಥಕ ಪದಗಳು, ವಿರುದ್ಧಾರ್ಥಕ ಪದಗಳು ಇವುಗಳ ಪರಿಜ್ಞಾನ, ಇಂಗ್ಲೀಷ್/ಕನ್ನಡ ಭಾಷೆಯನ್ನು ಅರಿಯುವ ಮತ್ತು ಗ್ರಹಿಸುವ ಅಭ್ಯರ್ಥಿಯ ಶಕ್ತಿಯ ಮತ್ತು ಅದರ ಸರಿಯಾದ ಹಾಗೂ ತಪ್ಪು ಬಳಕೆ ಇತ್ಯಾದಿಗಳನ್ನು ಪರಿಶೀಲಿಸುವ ಅಭ್ಯರ್ಥಿಯ ಸಾಮರ್ಥ್ಯ ಇವುಗಳನ್ನು ಪರೀಕ್ಷಿಸಲು ಉದ್ದೇಶಿಸಲಾಗಿದೆ.
- ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಪತ್ರಿಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡತಕ್ಕದ್ದು. ಒಮ್ಮೆ ಆಯ್ಕೆ ಮಾಡಿದ ನಂತರ ಬದಲಾವಣೆಗೆ ಅವಕಾಶ ಇರುವುದಿಲ್ಲ.
- ಸಾಮಾನ್ಯ ಜ್ಞಾನ ಪತ್ರಿಕೆಯು ಸಾಮಾನ್ಯವಾಗಿ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಇರಬೇಕಾದ ಸಾಮಾನ್ಯ ಜ್ಞಾನಕ್ಕೆ ಸಂಬಂಧಪಟ್ಟ ಕನಿಷ್ಠ ವಿದ್ಯಾಮಟ್ಟಕ್ಕೆ ಸಮನಾಗಿರುವುದು ಮತ್ತು ಇದು ಭಾರತದ ಸಂವಿಧಾನ, ಭಾರತದ ಇತಿಹಾಸ ಮತ್ತು ಸಂಸ್ಕೃತಿ, ಸಾಮಾನ್ಯ ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ಇತ್ತೀಚಿನ ಘಟನೆಗಳು, ದೈನಿಕ ಜೀವನದಲ್ಲಿ ವಿಜ್ಞಾನ ಮತ್ತು ಒಬ್ಬ ವಿದ್ಯಾವಂತ ವ್ಯಕ್ತಿಯು ದೈನಂದಿನ ಜೀವನದಲ್ಲಿ ಗಮನಿಸಬಹುದಾದಂತಹ ವಿಷಯಗಳು ಇವುಗಳ ಮೇಲಿನ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

Syllabus for the competitive examination Paper-2 and Paper-3 for recruitment to the postsof Second Division Assistants in Karnataka State Civil Services

The examination will consist of two written papers, namely,-

Paper-2: General English or General Kannada

Paper-3: General Knowledge

The maximum marks for each paper will be 100. The questions in both the papers will be "Objective Multiple Choice Type". The duration for each paper will be 1½ hours.

- The paper on General English or General Kannada will normally conform to the minimum standard expected of a student who has passed the P.U.C. Examination. It is intended to test candidate's knowledge of English/Kannada grammar, vocabulary, spelling, synonyms, antonyms, his power to understand and comprehend English/Kannada language and his ability to discriminate between correct and incorrect usage, etc.,
- The candidates may select either the paper on General English or the paper on General Kannada.
- The paper on General Knowledge will normally conform to the minimum standard relating to General Knowledge, expected of a student who has passed P.U.C. Examination and will cover topics relating to Constitution of India, Indian History and Culture, General and Economic Geography of India, Current Events, every day science and such matters of every day observation as may be expected of an educated person.

## ಪತ್ರಿಕೆ-1ರ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಗೆ ಪಠ್ಯಕ್ರಮ

**(ಎಸ್.ಎಸ್.ಎಲ್.ಸಿ ಪರೀಕ್ಷೆಯ ಕನ್ನಡ ಪ್ರಥಮ ಭಾಷೆಯ ಮಟ್ಟದ ವಿವರಣಾತ್ಮಕ ಪತ್ರಿಕೆ)**

| ಕ್ರಮ ಸಂಖ್ಯೆ | ಪಠ್ಯ ಕ್ರಮ | ಅಂಕಗಳು |
|---|---|---|
| 1 | ವಿಷಯದ ಸಮಗ್ರ ಅರ್ಥೈಸುವಿಕೆ | 25 |
| 2 | ಪದ ಪ್ರಯೋಗ | 25 |
| 3 | ವಿಷಯ ಸಂಕ್ಷೇಪಣೆ | 25 |
| 4 | ಪದ ಜ್ಞಾನ | 25 |
| 5 | ಲಘು ಪ್ರಬಂಧ | 25 |
| 6 | ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ | 25 |
| ಒಟ್ಟು | | 150 |